**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 25.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

ನಾನು ಈ ಅರ್ಜಿಯಲ್ಲಿ ಅರ್ಜಿದಾರರ ಪರ ಸಾಕ್ಷಿದಾರನಾಗಿದ್ದೇನೆ.

ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರವನ್ನು ಈ ದಿನ ನ್ಯಾಯಾಲಯದ ಮುಂದೆ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ.

ನಾನು ನನ್ನ ವಿಚಾರಣೆಗೆ ಸಂಬಂಧಿಸಿದಂತೆ Locomotor Disability Certificate ನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.34 ಹಾಗೂ ಸದರಿ ದಾಖಲೆಯಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿಪಿ.34(ಎ) ಎಂದು, ಮೂರು out patient record ಗಳನ್ನು ಹಾಜರುಪಡಿಸಿದ್ದು ಸದರಿ ದಾಖಲೆಗಳನ್ನು ನಿಪಿ.35 ರಿಂದ 37 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ.ಆರ್ ಜಿ ಬಿ ವಕೀಲರಿಂದಃ**

ನಾನು ಕೆಎಂಸಿ ಯಲ್ಲಿ ಸುಮಾರು 20 ವರ್ಷಗಳಿಂದ Asst. Professor, Orthopaedics and Surgeon ಆಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ಯಾವುದೇ ಒಬ್ಬ ವ್ಯಕ್ತಿ ನಮ್ಮಲ್ಲಿ ಚಿಕಿತ್ಸೆಗೆ ಬಂದಾಗ ಹೊರರೋಗಿ ವಿಭಾಗದಿಂದ ನಂತರ ಒಳರೋಗಿ ವಿಭಾಗಕ್ಕೆ ಒಂದು ವೇಳೆ ಅವಶ್ಯಕತೆ ಇದ್ದರೆ ತೆಗೆದುಕೊಳ್ಳುತ್ತೇವೆ ಎಂದರೆ ಸರಿ. ಒಂದು ವೇಳೆ ಒಳರೋಗಿಯಾಗಿ ದಾಖಲ್ ಮಾಡಿಕೊಂಡರೆ ಹೊರರೋಗಿ ವಿಭಾಗಕ್ಕೊಂದು ರಜಿಸ್ಟರ್ ಇದ್ದು ಅದೇ ರೀತಿ ಒಳರೋಗಿ ವಿಭಾಗಕ್ಕೆ ಕೂಡ ರಜಿಸ್ಟರ್ ಇದ್ದು ಅದರಲ್ಲಿ ದಾಖಲಾದ

ಸಮಯ ಮತ್ತು ದಿನಾಂಕವನ್ನು ನಮೂದಿಸುತ್ತೇವೆ ಎಂದರೆ ಸರಿ. ಈ ಸಂಬಂಧ ಡಿಸ್ಚಾರ್ಜ ಸಮರಿಯನ್ನು ಅವರು ಯಾವ ಸಮಯಕ್ಕೆ ದಾಖಲಾದರು ಮತ್ತು ಬಿಡುಗಡೆಯಾದರು ಆ ಸಮಯದಲ್ಲಿ ಅವರ ಕಂಡಿಶನ್ ಹೇಗಿತ್ತು ಎಂಬುದನ್ನು ನಮೂದು ಮಾಡಿ ನಮ್ಮ ಬಳಿ ಒಂದು ಡಿಸ್ಚಾರ್ಜ ಸಮರಿಯನ್ನು ಇಟ್ಟುಕೊಂಡು ಗಾಯಾಳುವಿಗೆ ಒಂದು ಕಾಪಿ ಕೊಡುತ್ತೇವೆ ಎಂದರೆ ಸರಿ. ಈ ಪ್ರರಕಣಕ್ಕೆ ಸಂಬಂಧಿಸಿದಂತೆ ಈ ಕೇಸಿನ ಅರ್ಜಿದಾರರು ನಮ್ಮ ಆಸ್ಪತ್ರೆಗೆ ದಿಃ 27/10/2022 ರಂದು ಯಾವ ಸಮಯಕ್ಕೆ ಬಂದರು ಎಂಬ ಬಗ್ಗೆ ದಾಖಲೆ ಹಾಜರಪಡಿಸಿಲ್ಲ ಎಂದರೆ ಸರಿ. ನಿಪಿ.34 ರಲ್ಲಿ date of injury and time 11.00 am on 27/10/2022 ಎಂಬುದಾಗಿ ಇದೆ ಎಂದರೆ ಸರಿ. ಯಾವುದೇ ಒಂದು ಮಾನವನ ದೇಹದ ಒಂದು ಭಾಗ ಗಾಯಗೊಂಡಿದ್ದರೆ ಅದಕ್ಕೆ ಸಂಬಂಧಿಸಿದ ಒಂದು golden period ಎಂಬುದು ಇದ್ದು ಆ ಸಮಯದ ಒಳಗಡೆ ಬಂದರೆ ಆ ಅಂಗವನ್ನು ಚಿಕಿತ್ಸೆ ಮೂಲಕ ಉಳಿಸಬಹುದು ಎಂದರೆ ಸಾಕ್ಷಿ ಅದು ಯಾವ ರೀತಿಯ ಗಾಯಗಳು ಆಗಿದೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ ಎನ್ನುತ್ತಾರೆ. ನಾನು ಈ ಪ್ರಕರಣದಲ್ಲಿ ತೋರಿಸಿರುವ ಗಾಯಗಳನ್ನು ಒಂದು ವೇಳೆ ನಿಗದಿತ ಸಮಯದ ಒಳಗಡೆ ಅವರು ಬಂದಿದ್ದರೆ ಗುಣಪಡಿಸಬಹುದಿತ್ತು ಎಂದರೆ ಸಾಕ್ಷಿ ಅದು ಸಾಧ್ಯವಿರಲಿಲ್ಲ ಎನ್ನುತ್ತಾರೆ. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಅಪಘಾತವಾದ ಸಮಯ ಮತ್ತು ಆತ ಆಸ್ಪತ್ರೆಗೆ ದಾಖಲಾದ ಸಮಯವನ್ನು ನೋಡಿಕೊಂಡು ಬಂದಿದ್ದೀರಾ ಎಂದರೆ ಸಾಕ್ಷಿ ನೋಡಿದ್ದೇನೆ ಎನ್ನುತ್ತಾರೆ. ದಿಃ27/10/2022 ರಂದು ಗಾಯಾಳು ಅಪಘಾತವಾಗಿದೆ ಎಂದು ನಮ್ಮ ಆಸ್ಪತ್ರೆಗೆ ಸಾಯಂಕಾಲ 5.30 ರ ಸಮಯಕ್ಕೆ ಬಂದಿರುವ ಬಗ್ಗೆ ನಮ್ಮ ಕಡೆ ರೇಕಾರ್ಡ ಇದೆ ಎಂದರೆ ಸಾಕ್ಷಿ ಇದೆ ಎನ್ನುತ್ತಾರೆ. ಸದರಿ ಗಾಯಾಳು ನಮ್ಮ ಆಸ್ಪತ್ರೆಗೆ ಬಹಳ ತಡವಾಗಿ ಬಂದಿದ್ದಕ್ಕೆ

ಆತನಿಗೆ ಪರಿಹಾರ ಕೊಡಿಸಬೇಕೆಂಬ ಉದ್ದೇಶದಿಂದ ಆತನ ಕಾಲನ್ನು ಉಳಿಸಲು ಆಗಲಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಗಾಯಾಳು ಅಪಘಾತವಾದ ತಕ್ಷಣ ನಮ್ಮ ಆಸ್ಪತ್ರೆಗೆ ಬಂದಿದ್ದರೆ ಆತನ ಕಾಲನ್ನು ಚಿಕಿತ್ಸೆ ಮೂಲಕ ಉಳಿಸಬಹುದಿತ್ತು ಎಂಬುದು ನನಗೆ ಗೊತ್ತಿದ್ದರೂ ಕೂಡ ಮತ್ತೆ ಮತ್ತೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಗಾಯಾಳು ತನ್ನ ಕಾಲನ್ನು ಕಳೆದುಕೊಂಡಿರುವುದು ತನ್ನ ನಿಶ್ಕಾಳಜಿತನದಿಂದ ಎಂಬುದು ನನಗೆ ಗೊತ್ತಿದೆ ಎಂದರೆ ಸಾಕ್ಷಿ ಅದು ಸರಿಯಲ್ಲ ಎನ್ನುತ್ತಾರೆ. ಸದರಿ ಗಾಯಾಳು ನಮ್ಮ ಆಸ್ಪತ್ರೆಗೆ ದಾಖಲಾದ ನಂತರ ಈ ರೀತಿ ಅಪಘಾತದಲ್ಲಿ ಗಾಯಗೊಂಡು ಬಂದಿದ್ದಾರೆಂಬ ಬಗ್ಗೆ ಪೊಲೀಸರಿಗೆ ನಿಮ್ಮ ಆಸ್ಪತ್ರೆಯಿಂದ ಮಾಹಿತಿ ನೀಡಿದ್ದೀರಾ ಎಂದರೆ ಸಾಕ್ಷಿ ಸಾಮಾನ್ಯವಾಗಿ ಎಂ ಎಲ್ ಸಿ ರಜಿಸ್ಟರ್ ಮಾಡಿರುತ್ತಾರೆ ಆದರೆ ನಿಪಿ.34, 35, 36, 37 ಗಳಲ್ಲಿ ನಾನು ಈ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿ. ನ್ಯಾಯಾಲಯಕ್ಕೆ ಬರುವ ಸಮಯದಲ್ಲಿ ಎಂ ಎಲ್ ಸಿ ರಜಿಸ್ಟರ್ ಮಾಡಿರುವ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರಪಡಿಸಬೇಕಂದು ನಿಮಗೆ ಅನ್ನಿಸಲಿಲ್ಲವೇ ಎಂದರೆ ಸಾಕ್ಷಿ ಅದನ್ನು ನಾನು ನೋಡಿಲ್ಲ ಎನ್ನುತ್ತಾರೆ. ಕಿಮ್ಸ ಆಸ್ಪತ್ರೆಯಿಂದ ಈ ಗಾಯಾಳುವಿನ ವರದಿಯನ್ನು ಪೊಲೀಸ್ ಠಾಣೆಗೆ ಕಳುಹಿಸಿರುವುದಿಲ್ಲ ಆದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಒಂದು ಅಂಗನ್ಯೂನ್ಯತೆಯನ್ನು ಕೊಡಬೇಕಾದರೆ ಅದಕ್ಕೊಂದು method ಹಾಗೂ ಒಂದು ಅಂಗಕ್ಕೆ ಇಷ್ಟು percentage ಎಂದು ಸರ್ಕಾರದವರು ನಿಗದಿಪಡಿಸಿರುತ್ತಾರೆ ಎಂದರೆ ಸರಿ. ಸದರಿ ಅಂಗಗಳಿಗೆ ಸಂಬಂಧಿಸಿದಂತಹ ಒಂದು schedule ಇದೆ ಎಂದರೆ ಸರಿ. ಆ ಪ್ರಕಾರ ಕಾಲಿಗೆ amputation below knee ಆದರೆ ಒಂದು ಹಾಗೂ above knee ಆದರೆ ಒಂದು ಇದೆ ಎಂದರೆ ಸರಿ. ಸದರಿ ಅರ್ಜಿದಾರರಿಗೆ ಆದಂತಹ ಅಂಗನ್ಯೂನ್ಯತೆಗೆ 50

ರಿಂದ 60% schedule ಪ್ರಕಾರ ಬರುತ್ತದೆ ಆದರೆ ನಾನು ಹೆಚ್ಚಿನ ಅಂಗನ್ಯೂನತೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ನೀಡಿರುವ ಅಂಗನ್ಯೂನ್ಯತೆಯ ಪ್ರಮಾಣ ಶೆಡ್ಯೂಲ್ ಪ್ರಕಾರ ಇಲ್ಲ ಎಂಬುದು ಗೊತ್ತಿದ್ದರೂ ಕೂಡ ನಾನು ಅರ್ಜಿದಾರರಿಗೆ ಅನುಕೂಲವಾಗಲಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**